# ಕಲೆ, ಕೃತಿ, ಚಟುವಟಿಕೆಗಳ ನಡುವಣ ಸೇತುವೆ

(4ನೇ ಪುಟದಿಂದ)

ಸಾಧಾರಣವಾಗಿ ಅಕಾಡೆಮಿಯ ರಿಜಿಸ್ಟ್ರಾರ್ ಆದವರು ಕಲಾವಿದರು ಅಲ್ಲವಾದ್ದರಿಂದ ಅಕಾಡೆಮಿಯಲ್ಲಿ ದೈನಂದಿನ ಕಲಾಚಟುವಟಿಕೆಗಳಿಗೆ ಸಾಕಷ್ಟು ತೊಡಕಾಗುತ್ತಿತ್ತು. ಮರಿಯವರು ಕಲಾವಿದರೂ, ರಿಜಿಸ್ಟ್ರಾರರೂ ಆಗಿದ್ದರಿಂದ ಕಲಾ ಕಾರ್ಯವನ್ನು ಸುಸೂತ್ರಗೊಳಿಸಿದರು. ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕನ್ನಡ ಭವನವನ್ನು ನೋಡಿದಾಗಲೆಲ್ಲ ಮರಿಶಾಮಾಚಾರರೇ ನನ್ನ ಕಣ್ಣೆದುರಿಗೆ ಬರುತ್ತಾರೆ. ಆದ್ದರಿಂದಲೇ ನಾನು ಈ ಮುನ್ನ ಹೇಳಿದ್ದು, ನಿವೃತ್ತಿಯ ನಂತರ ದೃಶ್ಯಕಲೆಯಲ್ಲಿ ಅವರು ನಿರ್ವಹಿಸಿದ ಕಾರ್ಯಗಳಿಗೆ ಪರ್ಯಾಯಗಳನ್ನು ಹುಡುಕುವುದು ವ್ಯರ್ಥವೆಂದು.

ಯಾರೂ ಕಂಡು ಕೇಳರಿಯದಿದ್ದ ಕಲಾವಿದರನ್ನು ಹುಡುಕಿ, ಹೆಕ್ಕಿ ತೆಗೆದು ಬೆಳಕಿಗೆ ತಂದವರು ಮರಿಶಾಮಾಚಾರ್. ಇದು ಬಹಳ ಗುರುತರವಾದ ಕಲಾಚಟುವಟಿಕೆ. ಹೆಬ್ಬಾರರನ್ನು ಕುರಿತಾದ, ಇವರ ಬರವಣಿಗೆಯನ್ನೊಳಗೊಂಡ ಕಾಫಿ ಟೇಬಲ್ ಪುಸ್ತಕವೊಂದು ಇದೀಗ ಹೊರಬಂದಿದೆ. ಬಂದದ್ದೆಲ್ಲವನ್ನೂ ತನ್ನೊಡಲಲ್ಲಿ ಇರಿಸಿಕೊಂಡು ಕಾರ್ಯ ನಿರ್ವಹಿಸುವ ಮುತ್ಸದ್ದಿತನ ಮರಿಯವರದ್ದು. ಪರಿಚಯವಾದವರೊಂದಿಗೆ ದೀರ್ಘಕಾಲ ಸಂಪರ್ಕ ಇರಿಸಿಕೊಳ್ಳುವುದು ಅವರ ಅಭ್ಯಾಸ. ಮರಿಯವರು ಹೇಳುವ ಆಸಕ್ತಿಕರ ವಿಷಯವೆಂದರೆ 'ನಿವೃತ್ತಿಯ ನಂತರ ಪೂರ್ಣಾವಧಿ ಕಲಾ ಸೃಷ್ಟಿಯಲ್ಲಿ ತೊಡಗಿಕೊಳ್ಳುತ್ತೇನೆ' ಎಂಬ ಕನಸು. ಎಂದಿಗಿಂತಲೂ ಈಗ ಅದರ ತುರ್ತು ಅಗತ್ಯವಿದೆ ಎಂಬ ಅರಿವು ಅವರಿಗಿದೆ.

ನನ್ನ ಗ್ರಹಿಕೆಗೆ ಬಂದಂತೆ ಸಂಸ್ಕೃತಿ ಇಲಾಖೆಯ ಸುಮಾರು ಐವತ್ತರಿಂದ ಅರವತ್ತು ಶೇಕಡಾ ಕಾರ್ಯಕ್ರಮಗಳು ಇವರಿಲ್ಲದೆ ನಡೆಯಲಾರವು. ಬರೀ ಸಂಸ್ಕೃತಿ ಇಲಾಖೆಗಷ್ಟೇ ಕೆಲಸ ಮಾಡದೆ ಮರಿಯವರು ತಮ್ಮ 'ಸಂಯೋಜಿತ' ಕಲಾಸಂಘಟನೆಯಲ್ಲಿ ಚಂದ್ರನಾಥ್ ಆಚಾರ್ಯ, ಶೀಲಾಗೌಡ, ಜೆ.ಎಂ.ಎಸ್. ಮಣಿ ಮುಂತಾದ ಪ್ರಮುಖ ಕಲಾವಿದರೊಂದಿಗೆ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಾ ಬಂದಿದ್ದಾರೆ.

ವ್ಯಕ್ತಿಯಾಗಿ ಮರಿ ಬಹಳ ಒಳ್ಳೆಯ ವ್ಯಕ್ತಿತ್ವದವರು. ಯಾವ ಕಲಾವಿದರೊಂದಿಗೂ ಅವರು ಜಗಳವಾಡಿಕೊಂಡದ್ದನ್ನು ನಾನು ಕಂಡಿಲ್ಲ. ಪ್ರದರ್ಶನವೊಂದನ್ನು ಏರ್ಪಡಿಸುವ ಬಗ್ಗೆ, ಕಲಾಶಿಬಿರಗಳ, ಕಲಾಪ್ರದರ್ಶನಗಳ ಆಯೋಜನೆಗಳ ಬಗ್ಗೆ ಆಗಿನ ಕಾರ್ಯದರ್ಶಿ ಐ.ಎಂ. ವಿಠಲಮೂರ್ತಿ ಅವರೊಂದಿಗೆ ಮಾತನಾಡುವಾಗಲೆಲ್ಲ ನಾನು ಮರಿಶಾಮಾಚಾರರ ಹೆಸರನ್ನೇ ಆ ಕೆಲಸಕ್ಕಾಗಿ ಸೂಚಿಸುತ್ತಿದ್ದೆ. ಅವರಂತಹ ಒಳ್ಳೆಯ ವ್ಯಕ್ತಿ. ಒಳ್ಳೆಯ ಬರಹಗಾರ. ಒಳ್ಳೆಯ ಆಯೋಜಕರು ಒಟ್ಟಿಗೆ ಒಬ್ಬರಲ್ಲೇ ಕಂಡು ಬರುವುದು ಬಲುಕಷ್ಟ. ಅದಕ್ಕಾಗಿ ಅವರು ತಮ್ಮ ಸ್ವಂತ ಕಲೆಯನ್ನೇ ಇಲ್ಲಿಯವರೆಗೂ ತ್ಯಾಗ ಮಾಡುತ್ತ ಬಂದಿದ್ದಾರೆ.

ಚೋಳಮಂಡಲ ಕಲಾವಿದರು ಸಹಾಯಧನಕ್ಕಾಗಿ ಎಂದೂ ಸರ್ಕಾರವನ್ನು ಸಂಪರ್ಕಿಸಿಲ್ಲ. ಬದಲಿಗೆ ಸಹ ಕಲಾವಿದರಾದ ಸಿನೆಮಾ ನಟರನ್ನು ಸಂಪರ್ಕಿಸುತ್ತಿದ್ದರು. ದೃಶ್ಯ ಕಲೆಯನ್ನು ಕುರಿತಾದ ಅವರುಗಳ ಗ್ರಹಿಕೆ ಪೂರ್ಣವಾಗಿ ಭಿನ್ನವಾಗಿರುತ್ತಿತ್ತು. ತಮಿಳುನಾಡಿನ ಆಧುನಿಕ ಕಲೆಯ ಸಂಗ್ರಹಾಲಯಕ್ಕೂ ಕರ್ನಾಟಕದ ಸಂಗ್ರಹಾಲಯಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಎರಡು ವರ್ಷಗಳ ಹಿಂದೆ ನಲವತ್ತೈದು ಕಲಾವಿದರ ಕೃತಿಗಳ ಸಂಗ್ರಹವುಳ್ಳ ಸಂಗ್ರಹಾಲಯವೊಂದನ್ನು ಮದ್ರಾಸಿನಲ್ಲಿ ಸ್ಥಾಪಿಸಿದೆವು. ಕಾರ್ಪೊರೇಟ್ ತಲೆಗಳ ಸಹಾಯದಿಂದ. ಚೋಳಮಂಡಲದ ಆರಂಭಿಕ ದಿನಗಳಲ್ಲಿ ನಮಗೆ ಗ್ಯಾಲರಿಗಳಿರಲಿಲ್ಲ. ಕರ್ನಾಟಕದಲ್ಲೂ ಸಹ. ಆಗ ವೆಂಕಟಪ್ಪ ಕಲಾ ಶಾಲೆಯನ್ನು ಆರಂಭಿಸಲು ಒತ್ತಡ ತಂದೆವು. ವಿಠ್ಠಲಮೂರ್ತಿಯಂತಹ ಅಧಿಕಾರಿಗಳು, ಮರಿಶಾಮಾಚಾರರಂತಹ ಕಲಾಭಿಯಂತರರು ಇಂತಹ ಕಲಾ ಸಾಮೂಹಿಕ ಕಾರ್ಯಕ್ರಮಗಳಿಗೆ ಅನಿವಾರ್ಯವಾಗುವುದು ಇಂತಲ್ಲಿಯೇ. ನಾಲ್ಕೈದು ವರ್ಷಗಳ ಹಿಂದೆ ವಿಠ್ಠಲಮೂರ್ತಿಯವರು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾಗಿ ಬಂದಾಗ ನಮ್ಮ ಕಲಾವಿದರ ಬೇಡಿಕೆಯ ಶೇಕಡಾ 30ರಷ್ಟು ಅಗತ್ಯಗಳನ್ನು ಪೂರೈಸಿದರು. ಇಂತಹ ಅಧಿಕಾರಿಗಳು ಕಲಾ ವಲಯಕ್ಕೆ ಎಂದಿಗೂ ಅನಿವಾರ್ಯವೇ ಹೌದು.

ಮರಿಶಾಮಾಚಾರ್‌ರನ್ನು ಗೌರವಿಸುವುದು ಸಮಾಜದ ಕಲಾಪ್ರಜ್ಞಾವಂತಿಕೆಯ ದ್ಯೋತಕ. ಅದು ಆಗುತ್ತಿರುವುದು ಕನ್ನಡ ಸಂಸ್ಕೃತಿಯ ಹೆಗ್ಗಳಿಕೆಯೂ ಹೌದು.





